ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಕೃಷ್ಣತುಂಗ ಆವರಣ, ಮಂತ್ರಾಲಯ ರಸ್ತೆ, ರಾಷ್ಟ್ರೀಯ ಹೆದ್ದಾರಿ–167, ಯರಗೇರಾ – 584 133, ರಾಯಚೂರು, ಕರ್ನಾಟಕ

**ಕಾಲೇಜು ಅಭಿವೃದ್ಧಿ ಮಂಡಳಿ**

ಸಂ: ರಾವಿ/ಕಾಅಮಂ/OA/2025–26/01 ದಿನಾಂಕ :22.10.2024

# ಸಂಯೋಜನಾ ಅಧಿಸೂಚನೆ

**ವಿಷಯ:** 2025–26ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳ ತಾತ್ಕಾಲಿಕ/ಶಾಶ್ವತ ಸಂಯೋಜನೆಗಳ ಮುಂದುವರಿಕೆ/ವಿಸ್ತರಣೆ ಮತ್ತು ಹೊಸ ಕಾಲೇಜು, ಹೊಸ ಕೋರ್ಸು, ಹೊಸ ವಿಷಯ, ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ **ಆನ್‌ಲೈನ್ ಮುಖಾಂತರ ಅರ್ಜಿ** ಸಲ್ಲಿಸುವ ಕುರಿತು.

ಉಲ್ಲೇಖ: 1. ಸರ್ಕಾರಿ ಆದೇಶ ಸಂ. ಇಡಿ 212 ಯುಎನ್‌ಇ 2024 ಬೆಂಗಳೂರು ದಿ.04–10–2024

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 23.10.2024

*****

ರಾಯಚೂರು ವಿಶ್ವವಿದ್ಯಾಲಯವು 2025–26ನೇ ಶೈಕ್ಷಣಿಕ ಸಾಲಿಗೆ **ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ** ವ್ಯಾಪ್ತಿಯಲ್ಲಿ ಬರುವ ಸ್ನಾತಕ, ಸ್ನಾತಕೋತ್ತರ ಕೋರ್ಸಗಳ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳಿಗೆ ಸಂಯೋಜನೆ ಪ್ರಕ್ರಿಯೆ ಪ್ರಾರಂಭಿಸಿದೆ. ಮೇಲ್ಕಾಣಿಸಿದ ಎರಡು ಜಿಲ್ಲೆಗಳಲ್ಲಿ ಈಗಾಗಲೇ (ಅ) ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ತಾತ್ಕಾಲಿಕ ಸಂಯೋಜನೆ ಮುಂದುವರಿಕೆ/ವಿಸ್ತರಣೆ, ಅಸ್ತಿತ್ವದಲ್ಲಿರುವ ಕಾಲೇಜನ್ನು ರದ್ದುಮಾಡಿಕೊಳ್ಳುವುದು; (ಬ) ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ ; (ಕ)ಹೊಸ ಕೋರ್ಸು/ಹೊಸ ವಿಷಯ/ಹೊಸ ಭಾಷೆ ಅಳವಡಿಕೆ/ ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳಕ್ಕಾಗಿ ಹಾಗೂ **(ಡ)** ನೋಂದಾಯಿತ ಶಿಕ್ಷಣ ಸಂಸ್ಥೆ/ಟ್ರಸ್ಟಗಳಿಂದ ಹೊಸ ಸ್ನಾತಕ/ಸ್ನಾತಕೋತ್ತರ ಕಾಲೇಜು ಪ್ರಾರಂಭಿಸಲು ಸಂಯೋಜನಾ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**I. ಸ್ನಾತಕ ಕೋರ್ಸುಗಳು**

1. ಕಲಾ, ವಿಜ್ಞಾನ, ವಾಣಿಜ್ಯ – (BA, BSc, BCom)
2. B.Com Logistics and Supply Chain Management ; B.Com Accounting and Finance
3. ಬಿಸಿಎ, ಬಿಬಿಎ– (BCA, BBA) ಕಡ್ಡಾಯವಾಗಿ AICTE ಯಿಂದ Letter of Approval ಪಡೆದಿರಬೇಕು
4. ಬಿಎಸ್‌ಡಬ್ಲೂ- (BSW)
5. ಬಿಎಡ್, ಬಿಪಿಎಡ್ (B.Ed, B.PEd) ಕಡ್ಡಾಯವಾಗಿ NCTE ಪೂರ್ವಾನುಮತಿ ಪಡೆದಿರಬೇಕು

**II. ಸ್ನಾತಕೋತ್ತರ ಕೋರ್ಸುಗಳು**

1. ಎಂ.ಎ. :ಕನ್ನಡ, ಇಂಗ್ಲೀಷ್, ಉರ್ದು ಮತ್ತು ಪರ್ಶಿಯ (MA: Kannada, English, Urdu & Persian)
2. ಎಂ.ಎ. : ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಮಹಿಳಾ ಅಧ್ಯಯನ, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ (MA: Sociology, Economics, Political Science, History, Women's Studies, MLiSc)
3. ಎಮ್‌ಜೆಎಮ್‌ಸಿ (ಜರ್ನಲಿಜಂ ಆ್ಯಂಡ್ ಮಾಸ್ ಕಮ್ಯುನಿಕೇಶನ್), ಎಂಎಸ್‌ಡಬ್ಲೂ (MJMC, MSW)
4. ಎಂ.ಎಸ್ಸಿ. : ರಸಾಯನಶಾಸ್ತ್ರ, ಭೌತಶಾಸ್ತ್ರ, ಗಣಿತಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ (MSc: Chemistry, Physics, Mathematics, Botany, Zoology )
5. ಎಂ.ಎಸ್ಸಿ.: ಇಲೆಕ್ಟ್ರಾನಿಕ್ಸ್ ಮತು ್ತಉಪಕರಣಾತ್ಮಕ ತಂತ್ರಜ್ಞಾನ, ಕಂಪ್ಯೂಟರ್ ಸೈನ್ಸ್, ಸೂಕ್ಷ್ಮಜೀವಶಾಸ್ತ್ರ (MSc: Electronics and Instrumentation, Computer Science, Microbiology)
6. ಎಂ.ಕಾಮ್ (**M.Com**)

**III. ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳು** (ವಿಶ್ವವಿದ್ಯಾಲಯದ BOSನ ಒಪ್ಪಿಗೆಗೆ ಒಳಪಟ್ಟು)

1. ಹಾಸ್ಪಿಟಲ್ ಮ್ಯಾನೇಜಮೆಂಟ್, ಕಂಪ್ಯೂಟರ ಅಪ್ಲಿಕೇಷನ್, ಫ್ಯಾಶನ ಡಿಜೈನ ಟೆಕ್ನಾಲಜಿ, ಜರ್ನಲಿಸಂ & ಮಾಸ್ ಕಮ್ಯೂನಿಕೇಶನ್ (PGDHM, PGDCA, PGDFDT, PGDJMC)

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

**Note:** ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಸಂಯೋಜನೆ ಹೊಂದಿದ ವಿಷಯಗಳನ್ನು ಹೊರತುಪಡಿಸಿ Open Elective Course ಗಳನ್ನು ಬೋಧಿಸುವುದಾದರೆ ಅಂತಹ ವಿಷಯಗಳಿಗೆ ಹೊಸ ವಿಷಯ ಎಂದು ಪರಿಗಣಿಸಿ ಆ ವಿಷಯಗಳಿಗೆ ಸಂಯೋಜನೆ ಪಡೆಯಬೇಕಾಗುತ್ತದೆ. (ಸರ್ಕಾರದ ಆಜ್ಞೆ ಸಂಖ್ಯೆ ಇಡಿ 112 ಯುಕೆವಿ 2022 ದಿನಾಂಕ 17.04.2023)

ಆನ್‌ಲೈನ್ ಮುಖಾಂತರ ಸಂಯೋಜನೆಯ ಅರ್ಜಿಯನ್ನು ಸಲ್ಲಿಸಲು ಈ ಕೆಳಗೆ ನೀಡಿದ ಅಂತರ್ಜಾಲ link ನ್ನು ಉಪಯೋಗಿಸಬೇಕು https://uucms.karnataka.gov.in/

ಇತರ ಮಾಹಿತಿ ಹಾಗೂ ಸಂಯೋಜನಾ ಶುಲ್ಕದ ವಿವರಗಳಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ **raichuruniversity.ac.in** ನ್ನು ಸಂದರ್ಶಿಸಬೇಕು.

| **ಸಂಯೋಜನಾ ಅರ್ಜಿ ಸಲ್ಲಿಸಲು ದಂಡ ಶುಲ್ಕ ರಹಿತವಾಗಿ** | **ಸಂಯೋಜನಾ ಅರ್ಜಿ ಸಲ್ಲಿಸಲು ದಂಡ ಶುಲ್ಕ ರೂ.10,000 ದೊಂದಿಗೆ** |
|---|---|
| 25-10-2024 ರಿಂದ<br>10-11-2024 ರವರೆಗೆ | 11-11-2024 ರಿಂದ<br>15-11-2024 ವರೆಗೆ |
| ವಿಶ್ವವಿದ್ಯಾಲಯಕ್ಕೆ ಮುದ್ರಿತ (Hard Copy) ಪ್ರತಿ ಸಲ್ಲಿಸುವ ಕೊನೆಯ ದಿನಾಂಕ<br>13-11-2024 | ವಿಶ್ವವಿದ್ಯಾಲಯಕ್ಕೆ ಮುದ್ರಿತ (Hard Copy) ಪ್ರತಿ ಸಲ್ಲಿಸುವ ಕೊನೆಯ ದಿನಾಂಕ<br>17-11-2024 |
| **ಅವಧಿ ಮೀರಿದ ನಂತರ ಸಲ್ಲಿಸಿದ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ** | |

**ಸೂಚನೆಗಳು :**

**1.** ಯಾವುದೇ ಮಹಾವಿದ್ಯಾಲಯವು ಪ್ರಸಕ್ತ (2025-26) ಸಾಲಿನಲ್ಲಿ ಸರಕಾರದ ಆದೇಶದಂತೆ ಸರ್ಕಾರದ ಆನ್ ಲೈನ್ ಸಂಯೋಜನೆಯ 8 Defined Parameters ಹಾಗೂ ನಾಲ್ಕು criteria ಗಳ 57 parameters ಗಳ ಪ್ರಕಾರ ಕಾಲೇಜು ಹೊಂದಿರುವ ಮೂಲಭೂತ ಸೌಕರ್ಯಗಳಾದ ತರಗತಿ ಕೋಣೆಗಳು, ಪ್ರಯೋಗಾಲಯಗಳು, ಗ್ರಂಥಾಲಯ, ಸಂಪನ್ಮೂಲಗಳು ಹಾಗೂ ಬೋಧಕರ ಸಂಖ್ಯೆ ಮತ್ತು ಗುಣಮಟ್ಟ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಸೌಲಭ್ಯಗಳು ಅಲ್ಲದೇ ವಿದ್ಯಾರ್ಥಿಗಳ ಫಲಿತಾಂಶ ಹಾಗೂ ಪ್ಲೇಸ್‌ಮೆಂಟ್ ಸೇರಿದಂತೆ ಸ್ಥಳೀಯ ವಿಚಾರಣಾ ಸಮಿತಿಯು ಮಾಡುವ ಮೌಲ್ಯಮಾಪನದ ಆಧಾರದ ಮೇಲೆ ಅಸ್ತಿತ್ವದಲ್ಲಿರುವ ಕಾಲೇಜುಗಳು 2025-26 ನೇ ಶೈಕ್ಷಣಿಕ ಸಾಲಿನ ಸಂಲಗ್ನತೆಯಲ್ಲಿ ಈ ಕೆಳಕಾಣಿಸಿದಂತೆ ಸಂಲಗ್ನತೆ ಸ್ಕೋರ ಹೊಂದಿದಲ್ಲಿ ಮಾತ್ರ 2025-26 ರ ಶೈಕ್ಷಣಿಕ ಸಾಲಿಗೆ ಮಂಜೂರಾತಿ ನೀಡಲಾಗುವುದು.

| | | | |
|---|---|---|---|
| I. | ಹೊಸ ಕಾಲೇಜುಗಳಿಗೆ ಸಂಯೋಜನೆ | – | ಪ್ರತಿಶತ 45 |
| II. | ಸಂಯೋಜನೆಗಳ ನವೀಕರಣ/ ಮುಂದುವರಿಕೆ/ ವಿಸ್ತರಣೆ | – | ಪ್ರತಿಶತ 45 |
| III. | ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಮಂಜೂರಾತಿಗಾಗಿ | – | ಪ್ರತಿಶತ 50 |



ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ

IV. ಹೊಸ ಕೋರ್ಸು/ Core Discipline ಹೊಸ ಭಾಷಾ ವಿಷಯ ಮಂಜೂರಾತಿಗಾಗಿ – ಪ್ರತಿಶತ 55

V. ಹೊಸ ಶಾಶ್ವತ ಸಂಲಗ್ನತೆ ಮಂಜೂರಾತಿಗಾಗಿ – ಪ್ರತಿಶತ 60

VI. ಶಾಶ್ವತ ಸಂಲಗ್ನತೆ ನವೀಕರಣ ಮಂಜೂರಾತಿಗಾಗಿ – ಪ್ರತಿಶತ 70

2. ಯಾವುದೇ ಮಹಾವಿದ್ಯಾಲಯವು ಎರಡು ವರ್ಷದಲ್ಲಿ Defined Parameters ಎಲ್ಲಾ 8 ಅಂಶಗಳನ್ನು ಪೂರ್ಣಗೊಳಿಸದಿದ್ದಲ್ಲಿ ಮತ್ತು ಕನಿಷ್ಠ 45 ಸಂಯೋಜನಾ ಅಂಕಗಳನ್ನು ಗಳಿಸದೇ ಇದ್ದಲ್ಲಿ, ಅಂತಹ ಮಹಾವಿದ್ಯಾಲಯದಲ್ಲಿ 2025-26 ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ವರ್ಷದ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ನಿಷಿದ್ಧಗೊಳಿಸಲಾಗುವುದು ಮತ್ತು ದ್ವಿತೀಯ ಮತ್ತು ತೃತೀಯ ವರ್ಷದ ಪದವಿ ತರಗತಿಗಳನ್ನು / ದ್ವಿತೀಯ ವರ್ಷದ ಸ್ನಾತಕೋತ್ತರ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಕಾಲೇಜು ನಡೆಸಲು ಅವಕಾಶ ಕಲ್ಪಿಸಿ, ನಂತರ ಕಾಲೇಜಿನ ಸಂಲಗ್ನತೆ ರದ್ದುಪಡಿಸಲಾಗುವುದು.

3. ಪತ್ರ ವ್ಯವಹಾರಕ್ಕೆ ಸಂಪೂರ್ಣ ಖಾಯಂ ವಿಳಾಸ, ಕಾಲೇಜಿನ Email id ಪ್ರಾಚಾರ್ಯರ ಚಾಲ್ತಿಯಲ್ಲಿರುವ Mobile phone ಸಂಖ್ಯೆ ನೀಡತಕ್ಕದ್ದು, ಕಾಲೇಜು/ಸಂಸ್ಥೆ ನೀಡಿದ ವಿಳಾಸ Email id ಹಾಗೂ ಪ್ರಾಚಾರ್ಯರ Mobile ಸಂಖ್ಯೆಗೆ WhatsApp Message ಮೂಲಕ ಸಂವಹನ/ ಪತ್ರ ವ್ಯವಹಾರ ಮಾಡಲಾಗುವುದು. ವಿಶ್ವವಿದ್ಯಾಲಯವು ಈ ಮೂಲಕ ಕಳುಹಿಸಿದ ಮಾಹಿತಿ ತಲುಪದೇ ಇದ್ದಲ್ಲಿ ನೇರವಾಗಿ ಕಾಲೇಜು ಜವಾಬ್ದಾರವಾಗಿರುತ್ತದೆ ಆದರೆ ರಾಯಚೂರು ವಿಶ್ವವಿದ್ಯಾಲಯವು ಜವಾಬ್ದಾರವಾಗುವದಿಲ್ಲವೆಂದು ತಿಳಿಸಲಾಗಿದೆ.

4. ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಗಮನಿಸಬೇಕಾದ ಅಂಶಗಳನ್ನು ಪಾಲಿಸಬೇಕಾದ ಷರತ್ತುಗಳನ್ನು ಹಾಗೂ ಲಗತ್ತಿಸಬೇಕಾದ ದಾಖಲಾತಿಗಳು ಹಾಗೂ ಶುಲ್ಕದ ಬಗೆಗಿನ ವಿವರಗಳನ್ನು ಪ್ರಾಂಶುಪಾಲರು ಗಮನಿಸಿ ಪೂರ್ವ ತಯ್ಯಾರಿ ಮಾಡಿಕೊಂಡು ಸಲ್ಲಿಸಬೇಕಾದ ಎಲ್ಲ pdf file format ದಲ್ಲಿರುವ scanned ದಾಖಲೆಗಳಿಗೆ ತಮ್ಮ ಮೊಹರು ಹಾಗೂ ಸಹಿಯೊಂದಿಗೆ ದೃಢೀಕರಿಸಿ ಸಲ್ಲಿಸಬೇಕು (seal and signature of the Principal on every document is mandatory) ಲಗತ್ತಿಸಬೇಕು.

5. ವಿವಿಧ ರೀತಿಯ ಸಂಯೋಜನಾ ಶುಲ್ಕದ ವಿವರಗಳು, ಹೆಚ್ಚುವರಿ ಪ್ರವೇಶ, ಹೊಸ ಕಾಲೇಜು/ಕೋರ್ಸ/ವಿಷಯಕ್ಕೆ ಪಾವತಿಸಬೇಕಾದ ದಿಪಾಸಿಟನ್ನು ಅನುಬಂಧದಲ್ಲಿ ನೀಡಲಾಗಿದೆ. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 21 ಯುಬಿವಿ 2004. ಬೆಂಗಳೂರು ದಿ. 15-05-2004 ರ ಪ್ರಕಾರ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಂಸ್ಥೆಗಳ ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ ನಿಗದಿಯಾದ ಸಂಯೋಜನೆ ಶುಲ್ಕಗಳಲ್ಲಿ ಮಾತ್ರ ಶೇಕಡ 50 ರಷ್ಟು ವಿನಾಯಿತಿ ನೀಡಲಾಗುವುದು , ಆದರೆ ಈ ವಿನಾಯಿತಿಯು ಅರ್ಜಿ ಶುಲ್ಕ, ದಂಡ ಶುಲ್ಕ, ಹೊಸದಾಗಿ ಪ್ರಾರಂಭಿಸುವ ಕಾಲೇಜುಗಳಿಗೆ, ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಕೋರ್ಸ/ವಿಷಯಕ್ಕೆ ಸಂಬಂಧಿದ ಠೇವಣಿ ಶುಲ್ಕ (Deposit) ಇವುಗಳಿಗೆ ಅನ್ವಯಿಸುವದಿಲ್ಲ.

6. ವಿವಿಧ ರೀತಿಯ ಸಂಯೋಜನಾ ಕಾರ್ಯಗಳಿಗಾಗಿ ಭರಿಸಬೇಕಾದ ಶುಲ್ಕದ ವಿರಗಳನ್ನು **ಅನುಬಂಧ 1/A ದಿಂದ 1/F** ರಲ್ಲಿ ನೀಡಲಾಗಿದೆ. ಸಂಯೋಜನಾ ಶುಲ್ಕ ಸಂದಾಯವನ್ನು UUCMS ತಂತ್ರಾಂಶವನ್ನು ಉಪಯೋಗಿಸಿ ಮಾಡುವುದು. Offline Mode ನಲ್ಲಿ ಪಾವತಿ ಮಾಡುವುದಾದಲ್ಲಿ ಕಡ್ಡಾಯವಾಗಿ ಈ ಕೆಳಗೆ ನಮೂದಿಸಿದ ಬ್ಯಾಂಕ ಖಾತೆಗೆ ಮಾತ್ರ ಸಂದಾಯ ಮಾಡಬೇಕು

| | |
|---|---|
| **ಬ್ಯಾಂಕ್ ಖಾತೆ** | **: FINANCE OFFICER CDC AFFILIATION RAICHUR UNIVERSITY** |
| **ಬ್ಯಾಂಕ್ ಹೆಸರು** | **: UNION BANK OF INDIA, RAICHUR** |
| **ಖಾತೆ ಸಂಖ್ಯೆ** | **: 049112010000051** |
| **ಐಎಫ್‌ಎಸ್‌ಸಿ** | **: UBIN0804916** |

7. ಆನ್ ಲೈನ್ ಪೋರ್ಟಲದಲ್ಲಿ ಭರ್ತಿ ಮಾಡಿ submit ಮಾಡಿದನಂತರ ಕಡ್ಡಾಯವಾಗಿ ಸಂಯೋಜನಾ ಅರ್ಜಿಯ ಎರಡು ಮುದ್ರಿತ ಅರ್ಜಿ ಪ್ರತಿ, upload ಮಾಡಿದ ಎಲ್ಲಾ ದೃಡೀಕೃತ ದಾಖಲೆಗಳು, 2023-24ರ ಸಂಯೋಜನಾ ಅಧಿಸೂಚನೆ ಮತ್ತು ಮೇಲ್ಕಾಣಿಸಿದ ಶುಲ್ಕ ಸಂದಾಯದ University Copyಯನ್ನು bind ಮಾಡಿ ಕಡ್ಡಾಯವಾಗಿ **ಮೇಲೆ ಸೂಚಿಸಿದ ದಿನಾಂಕದೊಳಗಾಗಿ** ರಾಯಚೂರು ವಿಶ್ವವಿದ್ಯಾಲಯದ CDC ವಿಭಾಗಕ್ಕೆ ಸಲ್ಲಿಸಿ ಸ್ವೀಕೃತಿ ಪ್ರತಿ ಪಡೆದುಕೊಳ್ಳಬೇಕು.

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

8. ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ಅಪೂರ್ಣವಾದ ಅರ್ಜಿಗಳನ್ನು ಅಂದರೆ (ವಿವರಗಳು, ಶುಲ್ಕ ಪಾವತಿ, ಅವಶ್ಯಕ ದಾಖಲಾತಿಗಳು ಹಾಗೂ ಬೈಂಡಿಂಗ್ ಇರದೇ ಇದ್ದ) ಅರ್ಜಿಗಳನ್ನು ತಿರಸ್ಕರಿಸಲಾಗುವುದು.

9. 2025-26 ನೇ ಸಾಲಿಗೆ ಸಂಯೋಜನಾ ಮುಂದುವರಿಕೆ/ವಿಸ್ತರಣೆ ಮುಂತಾದವುಗಳಿಗಾಗಿ ಅರ್ಜಿ ಸಲ್ಲಿಸುವ ಕಾಲೇಜುಗಳು ಕಡ್ಡಾಯವಾಗಿ AISHE-DCF-IIನಲ್ಲಿ ಕಾಲೇಜಿನ ದತ್ತಾಂಶ ಅಪಲೋಡ್ ಮಾಡಬೇಕು ಇಲ್ಲವಾದಲ್ಲಿ ಅಂತಹ ಕಾಲೇಜುಗಳ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲ. ಅಲ್ಲದೇ AISHE-DCF-II ಪ್ರಮಾಣ ಪತ್ರದ ಝರಾಕ್ಸ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು.

10. ಹೊಸ ಮಹಾವಿದ್ಯಾಲಯದ ಸಂಯೋಜನೆ: ನೋಂದಾಯಿತ ಸಂಘ ಸಂಸ್ಥೆ / ಟ್ರಸ್ಟಗಳು ಹೊಸ ಮಹಾವಿದ್ಯಾಲಯದ ಸಂಲಗ್ನತೆ (New College) ಪಡೆಯಬೇಕಾದಲ್ಲಿ ವಿಶ್ವವಿದ್ಯಾಲಯಕ್ಕೆ ಮೊದಲು ಪತ್ರ ಮುಖೇನ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಈ ಮಾಹಿತಿಯನ್ನು UUCMS ಗೆ ಕಳುಹಿಸಲಾಗುವುದು. ತದನಂತರ UUCMS ತಂಡವು ಕಾಲೇಜಿಗೆ ನೇರವಾಗಿ User ID and Password ನೀಡುತ್ತದೆ, ಅವುಗಳನ್ನು ಉಪಯೋಗಿಸಿ Online ಮೂಲಕ ಸಂಯೋಜನೆಗೆ ಅರ್ಜಿಯನ್ನು ಸಲ್ಲಿಸುವುದು.

11. ಹೊಸ ಮಹಾವಿದ್ಯಾಲಯದ ಸಂಲಗ್ನತೆ (New College) ಕೋರಿ ಪ್ರಸ್ತಾವನೆ ಸಲ್ಲಿಸುವಾಗ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಡಿ 384 ಯುಎನ್ಇ 2020 ದಿನಾಂಕ 18-02-2022 ರ ಪ್ರಕಾರ ಸಂಘ/ ಸಂಸ್ಥೆಗಳು ಕಡ್ಡಾಯವಾಗಿ ಈ ಕೆಳಗೆ ಸೂಚಿಸಿದ ಕನಿಷ್ಠ ಜಮೀನಿನ ಕ್ಷೇತ್ರ, ಅದಕ್ಕೆ ಸಂಬಂಧಿಸಿದ ಭೂ ದಾಖಲೆಗಳು ಹಾಗೂ ಸುರಕ್ಷತಾ ಪ್ರಮಾಣ ಪತ್ರಗಳಾದ (a) Building Safety Certificate NBC-2016 ಪ್ರಕಾರ (b) Fire Safety Certificate ಸಂಬಂಧಿಸಿದ ಇಲಾಖೆಯಿಂದ ಪಡೆದು ಪ್ರಾಂಶುಪಾಲರು ಸಲ್ಲಿಸಬೇಕು.

**(ಅ) ಕಾಲೇಜು ಹೊಂದಿರಬೇಕಾದ ಕನಿಷ್ಠ ಭೂಮಿಯ ವಿಸ್ತೀರ್ಣ ಮತ್ತು ಅದರ ದಾಖಲೆಗಳು:**

1. The College/ Institution shall hold undisputed ownership and possession of land free from any or all encumbrances measuring ,
   a. Not less than **0.5** acres if it is located in **mega cities**.
   b. **1 acres** if it is located in BMRDA, City corporations and **district head** quarters.
   c. **1.5 acres** if it is located in Municipalities or **taluk head** quarters.
   d. **3 acres** if it is any other rural areas.

   Provided that these requirements shall not apply to colleges already affiliated to the university prior to the date of notification of UGC. (Affiliation of colleges by the universities) Regulations 2009 and its amendments in 2012, **only if the existing programmes and intake of students are not altered.**

2. The registered society/ trust in justified exceptional cases may be allowed to start the college for the 1st year of the programs in a readily available building, provided the institute should have the required land at the place proposed to establish the college on a permanent basis as per para 1 above.

3. In the bond to be executed by the registered society/ trust it shall be mentioned that after the college is affiliated, the same will not be shifted to different location other than the proposed land or will not be transferred to a different society / Trust.

ಸದರಿ ಜಮೀನು ಆಯಾ ಸಂಸ್ಥೆ ಅಥವಾ ಕಾಲೇಜಿನ ಹೆಸರಿನಲ್ಲಿದೆಯೇ ಎಂಬುದಕ್ಕೆ ಕೆಳಕಂಡ ದಾಖಲಾತಿಗಳನ್ನು ಕಳುಹಿಸತಕ್ಕದ್ದು . ಸದರಿ ಜಮೀನಿನ ಪಹಣಿ ಅಥವಾ ಮುನಿಸಿಪಾಲಿಟಿ/ ಕಾರ್ಪೋರೇಷನ್ ಗಳಿಂದ ಪಡೆದ ಇತ್ತೀಚಿನ e-ಖಾತಾ ನಕಲು

ಅಥವಾ

ಸದರಿ ಜಮೀನನ್ನು ಸಂಸ್ಥೆಯ/ ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ನೊಂದಾಯಿತವಾಗಿರುವ (ಎ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಸ್ ಡೀಡ್ ಅಥವಾ (ಸಿ) ದಾನಪತ್ರ.

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

(ಬ) ಕಟ್ಟಡ ಸುರಕ್ಷತಾ ದಾಖಲೆಗಳು: ಕಾಲೇಜಿನ ಕಟ್ಟಡದ ಸುರಕ್ಷತೆ ಕುರಿತು ಹೊರಡಿಸಿರುವ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ :ಇಡಿ 218 ಯುಎನ್‌ಇ 2020 ದಿ. 24.08.2020 ಮತು ಸಂಖ್ಯೆ :ಇಡಿ 143 ಯುಬಿವಿ 2020 ದಿ. 22.10.2020 ರ ಪ್ರಕಾರ National Building Code of India (NCB –2016) ದ ಪ್ರಕಾರ ಲೋಕೋಪಯೋಗಿ ಇಲಾಖೆಯಿಂದ ಕಾಲೇಜಿನ ಕಟ್ಟಡದ ಸಧೃಡತೆ/ಸುರಕ್ಷಾ ಪ್ರಮಾಣ ಪತ್ರ ಹಾಗೂ ಅಗ್ನಿ ಸೇವಾ ಇಲಾಖೆಯಿಂದ ಅಗ್ನಿ ಸುರಕ್ಷತಾ ಅಂದರೆ ಅಗ್ನಿಶಮನ ಸಮಾಪನ (Fire Safty Compliance Certificate but not Fire Safety Recommendation Certificate) ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಸದರಿ ದಾಖಲೆಗಳು ಇಲ್ಲದಿದ್ದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವದಿಲ್ಲಾ ಮತ್ತು ವಿಶ್ವವಿದ್ಯಾಲಯದ ಹಂತದಲ್ಲೇ ಅರ್ಜಿಗಳನ್ನು ತಿರಸ್ಕರಿಲಾಗುವುದು.

(ಕ) ಹೊಸ ಕಾಲೇಜುಗಳ ಸ್ಥಾಪನೆ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂ. ಇಡಿ 29 ಯು ಎನ್ ಇ 2021, ದಿನಾಂಕ :12.02.2021 ಹಾಗೂ 16.02.2021ರ ಪ್ರಕಾ ರ ಕನಿಷ್ಠ 45% ಸಂಯೋಜನಾ ಅಂಕಗಳನ್ನು ಗಳಿಸಬೇಕು.

**12.** ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕ ಅಥವಾ ಸ್ನಾತಕೋತ್ತರ ಪ್ರೊಗ್ರಾಮ್ / ಹೊಸ ವಿಷಯ / ಪ್ರವೇಶ ಮಿತಿ ಹೆಚ್ಚಳ / ಕಾಲೇಜಿನ ಸ್ಥಳ ಬದಲಾವಣೆ / ಹೆಸರು ಬದಲಾವಣೆ:ಸದರೀ ಪ್ರಸ್ತಾವನೆಗಳಿಗೆ ಕೂಡಾ ಸೂಚನೆ 11 ರಲ್ಲಿರುವ ಕನಿಷ್ಠ ಜಮೀನಿನ ಮಿತಿ ಹಾಗೂ ಸುರಕ್ಷತಾ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ (ಅ) ಮತ್ತು (ಬ) ಮಾರ್ಗಸೂಚಿಗಳು ಕಡ್ಡಾಯವಾಗಿ ಅನ್ವಯವಾಗುತ್ತವೆ ಜೊತೆಗೆ ವಿವಿಧ ಸಂಯೋಜನಾ ಕಾರ್ಯಗಳಿಗೆ ಸೂಚನೆ 1 ರಲ್ಲಿ ತಿಳಿಸಿದಂತೆ ಸಂಯೋಜನಾ ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

| | |
|---|---|
| ಸಂಯೋಜನೆ ನವೀಕರಣ/ಮುಂದುವರಿಕೆ/ವಿಸ್ತರಣೆ | 45% ಅಂಕಗಳು |
| ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿ | 50% ಅಂಕಗಳು |
| ಹೊಸ UG or PG Program / Discipline Specific Core Course (As per NEP) (Subject)/ Combination of Subjects (3 Major Subjects as per SEP) | 55% ಅಂಕಗಳು |
| ಪ್ರಥಮ ಬಾರಿ ಶಾಶ್ವತ ಸಂಯೋಜನೆ ಮಂಜೂರಾತಿಗೆ | 60% ಅಂಕಗಳು |
| ಶಾಶ್ವತ ಸಂಯೋಜನೆ ನವೀಕರಣ ಮಂಜೂರಾತಿಗೆ | 70% ಅಂಕಗಳು |

ಮೇಲ್ಕಂಡ ಮಾನದಂಡಗಳನ್ನು ಯಥಾವತ್ತಾಗಿ ಪಾಲಿಸುವುದು. ಒಂದು ವೇಳೆ ಈ ಮಾನದಂಡಗಳಲ್ಲಿ ವಿಧಿಸಿದ ಜಮೀನಿನ ವಿಸ್ತೀರ್ಣ ಕನಿಷ್ಠ ಮಿತಿಗಿಂತ ಕಡಿಮೆ ಇದ್ದಲ್ಲಿ / ಕಟ್ಟಡ ಸುರಕ್ಷತಾ ಪ್ರಮಾಣ ಪತ್ರಗಳು ಇರದೇ ಇದ್ದಲ್ಲಿ/ ಕನಿಷ್ಠ ಸಂಯೋಜನಾ ಅಂಕಗಳು ಬರದೇ ಇದ್ದಲ್ಲಿ ಅಂತಹ ಪ್ರಸ್ತಾವನೆಯನ್ನು ವಿಶ್ವವಿದ್ಯಾಲಯದ ಮಟ್ಟದಲ್ಲೇ ತಿರಸ್ಕರಿಸಲಾಗುವುದು ಹಾಗೂ ಅನಮೋದನೆಗೆ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದಿಲ್ಲ ಹಾಗೂ ವಿಶ್ವವಿದ್ಯಾಲಯಕ್ಕೆ ಭರಿಸಿದ ಶುಲ್ಕವನ್ನು ಮರಳಿ ನೀಡಲಾಗುವದಿಲ್ಲ.

**13.** ಯಾವುದೇ ವಿಷಯದಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸ ಪ್ರಾರಂಭಿಸಲು ಆ ಕಾಲೇಜಿನಲ್ಲಿ ಸಂಬಂಧಿಸಿದ ವಿಷಯದ ಪದವಿ ಕೋರ್ಸುಗಳನ್ನು ಕನಿಷ್ಠ 5 ವರ್ಷದಿಂದ ಕಡ್ಡಾಯವಾಗಿ ನಡೆಸುತ್ತಿರಬೇಕು. ಉದಾಹರಣೆಗೆ (ಅ) ಎಂ.ಕಾಂ ಕೋರ್ಸ ಪ್ರಾರಂಭಿಸಬೇಕೆನ್ನುವ ಕಾಲೇಜು ಕನಿಷ್ಠ 5 ವರ್ಷಗಳಿಂದ ಬಿಕಾಂ ಕೋರ್ಸನ್ನು ನಡೆಸುತ್ತಿರಬೇಕು (ಬ) MSc Chemistry ಕೋರ್ಸ ಪ್ರಾರಂಭಿಸುವ ಕಾಲೇಜು BSc ಪದವಿ ತರಗತಿಗೆ ಕನಿಷ್ಠ 5 ವರ್ಷಗಳಿಂದ Chemistry ವಿಷಯವನ್ನು ಬೋಧಿಸುತ್ತಿರಬೇಕು (ಕ) MA ಇತಿಹಾಸ ಕೋರ್ಸ ಪ್ರಾರಂಭಿಸುವ ಕಾಲೇಜು BA ಪದವಿ ತರಗತಿಗೆ ಕನಿಷ್ಠ 5 ವರ್ಷಗಳಿಂದ ಇತಿಹಾಸ ವಿಷಯವನ್ನು ಬೋಧಿಸುತ್ತಿರಬೇಕು ಮುಂದುವರೆದು ಪದವಿ ಕೋರ್ಸಗಳ ಇರುವ ಸ್ಥಳದಲ್ಲಿಯೇ ಸ್ನಾತಕೋತ್ತರ ಕೋರ್ಸಗಳನ್ನು ಬೋಧಿಸಬೇಕು.

**14.** ರಾಯಚೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಎಲ್ಲಾ ಮಹಾವಿದ್ಯಾಲಯಗಳು ಕಡ್ಡಾಯವಾಗಿ ಇಂಟರನೆಟ್ ಸೌಲಭ್ಯ ಮತ್ತು ವೆಬ್‌ಸೈಟ (Internet facility and College website) ಹೊಂದಿರತಕ್ಕದ್ದು. Online Affiliation ಮತ್ತು UUCMS ಬಳಕೆ

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

ಮಾಡುವುದು ಕಡ್ಡಾಯವಾಗಿರುವದರಿಂದ ಇಂಟರನೆಟ್/ ವೆಬ್‌ಸೈಟ್ ಅನಿವಾರ್ಯವಾಗಿರುತ್ತದೆ ಅಲ್ಲದೇ ಪ್ರತಿ ಕಾಲೇಜು ಕಂಪ್ಯೂಟರ ಆಪರೇಟರ / ಕಂಪ್ಯೂಟರ ಪರಿಣಿತರನ್ನು ಹೊಂದಿರುವುದು ಅತ್ಯಂತ ಅವಶ್ಯಕ ಹಾಗೂ ಕಡ್ಡಾಯವಾಗಿರುತ್ತದೆ.

**15.** **ಯಾವುದೇ ಸಂಸ್ಥೆ / ಕಾಲೇಜು ಸಂಲಗ್ನತೆಗಾಗಿ ಪಾವತಿ ಮಾಡಿದ ಶುಲ್ಕವನ್ನು ಯಾವ ಕಾರಣಕ್ಕೂ ಮರುಸಂದಾಯ ಅಥವಾ ಮುಂದಿನ ವರ್ಷಕ್ಕೆ ಹೊಂದಾಣಿಕೆ ಮಾಡಲು ಬರುವುದಿಲ್ಲವೆಂದು ತಿಳಿಸಲಾಗಿದೆ. ಈ ವಿಷಯದಲ್ಲಿ ಯಾವ ತರಹದ ಪತ್ರ ವ್ಯವಹಾರಕ್ಕೆ ಅವಕಾಶ ಇರುವದಿಲ್ಲ.**

**16.** ಸರಕಾರದ ಪತ್ರ ಸಂಖ್ಯೆ ಇಡಿ/384/ಯುಎನ್‌ಇ/2020 ದಿನಾಂಕ 30.12.2020ರನ್ವಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಸರಕಾರಿ ಮಹಾವಿದ್ಯಾಲಯಗಳ ಪ್ರಾಂಶುಪಾಲರು ತಮ್ಮ ಕಾಲೇಜಿನಲ್ಲಿ ಹೊಸ ಸ್ನಾತಕ/ಸ್ನಾತಕೋತ್ತರ ಕೋರ್ಸು/ ಹೊಸ ವಿಷಯ/ ವಿದ್ಯಾರ್ಥಿ ಪ್ರಮಾಣ ಹೆಚ್ಚಳದ ಕುರಿತು ಪ್ರಸ್ತಾವನೆಯನ್ನು ಸಲ್ಲಿಸುದಕ್ಕಿಂತ ಮೊದಲು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು, ಬೆಂಗಳೂರು ಇವರಿಂದ ಅನುಮೋದನೆ ಪಡೆದು ಅವರ ಸ್ಪಷ್ಟ ಶಿಫಾರಸ್ಸಿನೊಂದಿಗೆ ಮಾತ್ರ ಪ್ರಸ್ತಾವನೆ ಸಲ್ಲಿಸುವುದು.

**17.** ರಾಯಚೂರು ವಿಶ್ವವಿದ್ಯಾಲಯ ಏರ್ಪಡಿಸುವ ಎಲ್ಲಾ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಎಲ್ಲಾ ಮಹಾವಿದ್ಯಾಲಯಗಳು ಕಡ್ಡಾಯವಾಗಿ ಭಾಗವಹಿಸಬೇಕು.

**18.** ಸಂಲಗ್ನತೆಯ ಅರ್ಜಿ ಸಲ್ಲಿಸುವಾಗ, ಸರಕಾರದ ಆದೇಶ ಪತ್ರದನ್ವಯ (ಸಂಖ್ಯೆ ಇಡಿ 34 ಇಜಿಒವಿ 2020(ಭಾಗ-2), ದಿನಾಂಕ 26.04.2022) ನಿಗದಿತ ಎಲ್ಲಾ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸದರಿ ಆದೇಶ ಪತ್ರ ವಿಶ್ವವಿದ್ಯಾಲಯದ ವೆಬ್‌ಸೈಟ್ ನಲ್ಲಿ ನೋಡಬಹುದಾಗಿದೆ.

**19.** ರಜಿಸ್ಟರ್ಡ್ ಸಂಘ, ಸಂಸ್ಥೆಗಳು / ಟ್ರಸ್ಟ ತಮ್ಮ ಹೊಸ ಕಾಲೇಜಿನ ಸಂಲಗ್ನತೆಯ ಅರ್ಜಿಯೊಂದಿಗೆ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು(01–09).

1. Copy of the Registration Certificate of the Education Society/Trust.
2. Renewal Certificate of the Education Society/Trust.
3. Copy of the Memorandum of Articles of Association, Rules, Regulations and Bye-law.
4. If it is a Trust, a copy of the Trust Deed and evidence for having registered the same as per rules.
5. Latest Audit Report of the Education Society/Trust.
6. Audit Report of the college.
7. Annual Report of the Previous Year.
8. Place in which proposed college is to be located and its suitability (enclose building Plan etc,
9. In the case of SC/ST Management, a certificate issued by the competent authority should be enclosed.
10. An undertaking in Rs.100/- stamp paper duly certified by the notary should be given as in Part-C' which is stating that the college will comply with all provisions of the act, statutes, regulations, ordinance, guidelines issued from time to time etc..

**20.** BCA/BBA ಕೋರ್ಸಗಳಿಗೆ ಮುಂದುವರಿಕೆ/ಹೊಸ ಕೋರ್ಸಗಾಗಿ ಅರ್ಜಿ ಸಲ್ಲಿಸುವ ಕಾಲೇಜುಗಳು AICTE ಇಂದ ಪರವಾನಿಗೆ (Letter of Approval–LOA) ಪಡೆದಿರತಕ್ಕದ್ದು. ಅಂತಹ ಕಾಲೇಜುಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ.

**21.** ಕನಿಷ್ಠ 5 ವರ್ಷಗಳ ಸ್ನಾತಕ ಪದವಿಯನ್ನು ಯಶಸ್ವಿಯಾಗಿ ನಿರ್ವಹಿಸಿದ ಮಹಾವಿದ್ಯಾಲಯಗಳು ಮಾತ್ರ (ಸಂಬಂಧಿಸಿದ ವಿಷಯದಲ್ಲಿ) ಸ್ನಾತಕೋತ್ತರ Program ಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಸಂಬಂಧಿಸಿದ ಸ್ನಾತಕೋತ್ತರ ವಿಷಯಕ್ಕೆ ಸಂಬಂಧಿಸಿದ ಅವಶ್ಯಕ ಗ್ರಂಥಾಲಯ, ಪ್ರಯೋಗಾಲಯ, ವರ್ಗ ಕೊಠಡಿಗಳು. UGC ನಿಯಮಾವಳಿಗಳ ಪ್ರಕಾರ ಅರ್ಹತೆಯುಳ್ಳ ಪ್ರಾಧ್ಯಾಪಕರು ಇದ್ದರೆ ಮಾತ್ರ ಅರ್ಜಿ ಸಲ್ಲಿಸುವುದು. ಈ ಕುರಿತು ಮಾಹಿತಿಗಾಗಿ ವಿಶ್ವವಿದ್ಯಾಲಯದ ಸಂಬಂಧಿಸಿದ ವಿಭಾಗಕ್ಕೆ / ಸಿಡಿಸಿ ಕಾರ್ಯಾಲಯಕ್ಕೆ ಸಂಪರ್ಕಿಸಬಹುದು.

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

**22.** ಇಡಿ 143 ಯುಜಿವಿ 2020 ದಿನಾಂಕ 22.10.2020ರ ಸರ್ಕಾರದ ಆದೇಶದ ಪ್ರಕಾರ

a. ಹೊಸ ಕಾಲೇಜು/ಹೊಸ ಕೋರ್ಸ್/ಹೊಸ ವಿಷಯಕ್ಕೆ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯಗಳು ಸಂಯೋಜನೆಗೆ ಸಂಬಂಧಿಸಿದ ಎಲ್ಲಾ Defined Parameters(ಪ್ರತಿ ಲಗತ್ತಿಸಲಾಗಿದೆ) ಗಳನ್ನು ಹೊಂದಿದ ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯವಗಿದೆ ಅಲ್ಲದೇ Building Safety Certificate ಹಾಗೂ Fire Safety Certificate ಗಳನ್ನು ಹೊಂದಿರುವುದು ಕಡ್ಡಾಯವಾಗಿದೆ ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

b. ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ 2024-25ರವರೆಗೆ 8 Defined Parametrers ಗಳನ್ನು ಹೊಂದಲು ಅವಕಾಶ ನೀಡಿತ್ತು ಆದಕಾರಣ ಪ್ರಸಕ್ತ ವರ್ಷದಿಂದ ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ 8 Defined Parameters ಗಳನ್ನು ಪೂರೈಸುವುದು ಕಡ್ಡಾಯವಾಗಿರುತ್ತದೆ.

**23.** ಹೊಸದಾಗಿ ಆರಂಭಿಸಲಾಗುವ ಮಹಾವಿದ್ಯಾಲಯಗಳಾಗಲೀ ಅಥವಾ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಾಗಲೀ ಸರ್ಕಾರ ಹಾಗೂ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪ್ರವೇಶಕ್ಕಿಂತ ಹೆಚ್ಚಿಗೆ ಪ್ರವೇಶವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 60ರಂತೆ ತೆಗೆದುಕೊಳ್ಳುವಂತಿಲ್ಲ ಒಂದು ವೇಳೆ ಹೆಚ್ಚುವರಿಯಾಗಿ ಪ್ರವೇಶ ಪಡೆದ ಯಾವುದೇ ಒಬ್ಬ ವಿದ್ಯಾರ್ಥಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ -2000 ರ ಪ್ರಕರಣ 61ರಂತೆ ಮಹಾವಿದ್ಯಾಲಯ/ವಿಶ್ವವಿದ್ಯಾಲಯ ನಡೆಸುವ ಪರೀಕ್ಷೆಗಳಿಗೆ ಹಾಜರಾಗಲು ಅರ್ಹನಾಗಿರುವುದಿಲ್ಲ. ಒಂದು ವೇಳೆ ಹೆಚ್ಚುವರಿ ಪ್ರವೇಶ ತೆಗೆದುಕೊಂಡಲ್ಲಿ ಮುಂದಾಗುವ ಆಗು-ಹೋಗುಗಳಿಗೆ ಮಹಾವಿದ್ಯಾಲಯವೇ ಜವಾಬ್ದಾರಿಯಾಗಿರುತ್ತದೆ.

**24. ಶಾಶ್ವತ ಸಂಯೋಜನೆ : (3 ಶೈಕ್ಷಣಿಕ ವರ್ಷಗಳಿಗೆ ಮಾತ್ರ)**

(i) ಸತತವಾಗಿ ಐದು ವರ್ಷಗಳ ತಾತ್ಕಾಲಿಕ ಸಂಯೋಜನೆ ಪೂರ್ಣಗೊಂಡಿರುವ ಕೋರ್ಸಗಳಿಗೆ ಮತ್ತು ಹಿಂದಿನ ಐದು ವರ್ಷಗಳ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿದ ಮಹಾವಿದ್ಯಾಲಯಗಳು ತಮ್ಮ ಕೋರ್ಸಗಳಿಗೆ/ವಿಷಯಗಳಿಗೆ ಈ ಕೆಳಗಿನ ಅರ್ಹತೆಗಳನ್ನು ಹೊಂದಿದ್ದಲ್ಲಿ ಮಾತ್ರ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.

(ii) ಮಹಾವಿದ್ಯಾಲಯದ ಆಡಳಿತ ಮಂಡಳಿಯು ಕರ್ನಾಟಕ ಸರ್ಕಾರದ ನೋಂದಣಿ ಕಾಯ್ದೆಗಳಂತೆ ನೊಂದಣೆಯಾಗಿದ್ದು, ನಿಯಮಾನುಸಾರವಾಗಿ ಕಾಲಕಾಲಕ್ಕೆ ನೋಂದಣಿಯನ್ನು ನವೀಕರಣ ಮಾಡಿಕೊಂಡಿರಬೇಕು ಹಾಗೂ ಕಾಲಕಾಲಕ್ಕೆ ಆಡಳಿತ ಮಂಡಳಿಯ ಸಭೆಗಳನ್ನು ನಡೆಸಿರಬೇಕು ಹಾಗೂ ಕಾಯ್ದಿರಿಸಿದ ಸಭೆಗಳ ನಡಾವಳಿಗಳನ್ನು ಲಗತ್ತಿಸಿ ನೀಡುವುದು.

(iii) ತಮ್ಮ ಮಹಾವಿದ್ಯಾಲಯದ ಕೋರ್ಸಗಳಿಗೆ/ ವಿಷಯಗಳಿಗೆ ಶಾಶ್ವತ ಸಂಯೋಜನೆ ಪಡೆಯಲು ಇಚ್ಛಿಸಿದ್ದಲ್ಲಿ, ಮೊದಲು UGC ನಿಯಮದಂತೆ ಮಹಾವಿದ್ಯಾಲಯವು 2 (ಎಫ್) ಮಾನ್ಯತೆ ಪಡೆದಿರಬೇಕು.

(iv) ಮಹಾವಿದ್ಯಾಲಯಗಳು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ಸರ್ಕಾರವು ಕಾಲಕಾಲಕ್ಕೆ ನಿಗದಿಗೊಳಿಸುವ ನಿಯಮಾವಳಿಗಳಂತೆ ಸ್ವಂತ ಭೂಮಿ, ಕಟ್ಟಡ, ಬೋಧಕ ಸಿಬ್ಬಂದಿ ಹಾಗೂ ಇತರೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರಬೇಕು.

(v) ಶಾಶ್ವತ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯದವರು ಅರ್ಜಿಗಳೊಂದಿಗೆ, ಕಳೆದ 5 ವರ್ಷಗಳ ಮುಂದುವರಿಕೆ ಸಂಯೋಜನಾ ಅಧಿಸೂಚನೆಗಳು, ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷಾ ಫಲಿತಾಂಶಗಳು ಹಾಗೂ ಸಂಸ್ಥೆಯ/ಮಹಾವಿದ್ಯಾಲಯದ ಲೆಕ್ಕ ಪರಿಶೋಧಕರಿಂದ ದೃಢಿಕರಿಸಿದ ಲೆಕ್ಕ ಪರಿಶೋಧನಾ ವರದಿಗಳು ಹಾಗೂ ಸ್ಥಳೀಯ ತನಿಖಾ ಸಮಿತಿಯ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿರುವ ಬಗ್ಗೆ ಅನುಪಾಲನಾ ವರದಿಗಳನ್ನು ಪೂರ್ಣಗೊಳಿಸಿ ದೃಢೀಕರಿಸಿ ಒದಗಿಸಬೇಕು.

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

(vi) ಮಹಾವಿದ್ಯಾಲಯವು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಸರ್ಕಾರದ ನಿಯಮಾನುಸಾರವಾಗಿ ಕನಿಷ್ಠ 50% ರಷ್ಟು ಖಾಯಂ ಆಗಿ ನೇಮಕವಾದ ಸಿಬ್ಬಂದಿಗಳನ್ನು ಹೊಂದಿರಬೇಕು ಹಾಗೂ ನಿಯಮಗಳಿಗೆ ಅನುಗುಣವಾಗಿ ವೇತನ , ಪಿ.ಎಫ್, ಗ್ರಾಚುಯಿಟಿ, ಇ.ಎಸ್.ಐ ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಿರಬೇಕು.

**(vii)** ಹೀಗೆ ಎಲ್ಲಾ ಷರತ್ತುಗಳನ್ನು/ನಿಯಮಗಳನ್ನು ಪಾಲಿಸಿದ ಮಹಾವಿದ್ಯಾಲಯಗಳಿಗೆ ನೀಡಬೇಕಾದ ಶಾಶ್ವತ ಸಂಯೋಜನೆಯು **ವಿದ್ಯಾ ವಿಷಯಕ ಪರಿಷತ್ ಸಭೆ, ಸಿಂಡಿಕೇಟ್ ಸಭೆ ಹಾಗೂ ಸರ್ಕಾರದ ಅನುಮೋದನೆಗಳ ಷರತ್ತಿಗೆ ಹಾಗೂ ಕಾಲಕಾಲಕ್ಕೆ ಯುಜಿಸಿ/ ಸರ್ಕಾರದವರು ಹೊರಡಿಸುವ ಆದೇಶ/ ತಿದ್ದುಪಡಿಗಳ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

**25. ಶೇವಣಿ ಹಣ ಕುರಿತು :**

ಯಾವುದೇ ಸಂಘ/ಸಂಸ್ಥೆಯವರು ಹೊಸ ಪದವಿ ಮಹಾವಿದ್ಯಾಲಯ ಪ್ರಾರಂಭ , ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಕೋರ್ಸ/ಹೊಸ ವಿಷಯ, ಸ್ನಾತಕ ಕೋರ್ಸಗಳ ಮತ್ತು ವೃತ್ತಿಪರ ಸ್ನಾತಕ ಕೋರ್ಸಗಳಾದ BCA/BBA/BSW ಗಳಿಗೆ ಪ್ರವೇಶ ಮಿತಿ ಹೆಚ್ಚಳ ಇಚ್ಛಿಸಿದಲ್ಲಿ ಅಂತಹ ಅರ್ಜಿಗಳನ್ನು ನಿಯಮಾನುಸಾರ ಕ್ರಮ ಕೈಗೊಂಡು ಪ್ರಸಾವನೆಗಳನ್ನು ಕರ್ನಾಟಕ ಸರ್ಕಾರದ ಅನುಮೋದನೆಗೆ ಕಳುಹಿಸಲಾಗುವುದು. ಮುಂದುವರೆದು ಅಂತಹ ಪ್ರಸ್ತಾವನೆಗಳಿಗೆ ಸರ್ಕಾರದಿಂದ ಶಿಫಾರಸ್ಸು (ಮಂಜೂರಾತಿ) ದೊರೆತ ನಂತರ ಸಂಬಂಧಪಟ್ಟ ಸಂಘ/ಸಂಸ್ಥೆ ಅಥವಾ ಕಾಲೇಜು ಅನುಬಂಧ 1/D ಮತ್ತು 1/E ದಲ್ಲಿ ತಿಳಿಸಿದಂತೆ ಕಡ್ಡಾಯವಾಗಿ ಶೇವಣಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ನಿಗದಿತ ಶೇವಣಿ ಹಣವನ್ನು ವಿಶ್ವವಿದ್ಯಾಲಯಕ್ಕೆ ಪೂರ್ತಿ ಪ್ರಮಾಣದಲ್ಲಿ ಪಾವತಿಸಿದ ನಂತರವೇ ಸಂಯೋಜನಾ ಅಧಿಸೂಚನೆಯನ್ನು ನೀಡಲಾಗುವುದು ಅದರ ನಂತರವೇ ಹೊಸ ಪದವಿ ಮಹಾವಿದ್ಯಾಲಯ/ಹೊಸ ಕೋರ್ಸ/ಹೊಸ ವಿಷಯ ಪ್ರಾರಂಭಿಸಬೇಕಾಗುತ್ತದೆ.

**26. ಸರ್ಕಾರಿ ಮಹಾವಿದ್ಯಾಲಯಗಳಿಗೆ ಶುಲ್ಕ ವಿನಾಯಿತಿ, ಪ್ರವೇಶ ಮಿತಿ ಮುಂತಾದವುಗಳ ಕುರಿತು :**

ಸರ್ಕಾರ ಆದೇಶ ಸಂಖ್ಯೆ ಇಡಿ/240/ಯು.ಆರ್.ಸಿ/2000 ದಿನಾಂಕ 14.12.2004 ರ ಮೇರೆಗೆ ಸರ್ಕಾರಿ ಮಹಾವಿದ್ಯಾಲಯಗಳ ಸಂಯೋಜನೆಗೆ ಸರ್ಕಾರಿ ಮಹಾವಿದ್ಯಾಲಯಗಳಲ್ಲಿನ ನೂತನ ಪದವಿಗಳಿಗೆ/ವಿಷಯಕ್ಕೆ/ಭಾಷೆಗೆ/ವಿದ್ಯಾರ್ಥಿ ಪ್ರಮಾಣದ ಹೆಚ್ಚಳ ಹಾಗೂ ಮುಂದುವರಿಕೆ / ವಿಸ್ತರಣೆ ಮತ್ತು ಶಾಶ್ವತ ಸಂಯೋಜನೆಗೆ ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಬೇಕಾದ ಅರ್ಜಿ ಶುಲ್ಕ ಹಾಗೂ ಸಂಯೋಜನಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ ಆದರೆ ದಂಡಶುಲ್ಕಕ್ಕೆ ವಿನಾಯಿತಿ ಇರುವುದಿಲ್ಲ.

ವಿವಿಧ ಸ್ನಾತಕ ಮತ್ತು ಸಾತಕೋತ್ತರ ಕೋರ್ಸಗಳಿಗೆ ಪ್ರವೇಶ ಮಿತಿ ನಿಯಮದಲ್ಲಿ ಸರ್ಕಾರಿ ಕಾಲೇಜುಗಳಿಗೆ ಸಡಿಲಿಕೆ ಇರುವದಿಲ್ಲ ಎಲ್ಲ ಸಂಯೋಜಿತ ಸರ್ಕಾರಿ ಮತ್ತು ಖಾಸಗಿ ಮಹಾವಿದ್ಯಾಲಯಗಳಿಗೆ ಒಂದೇ ರೀತಿಯ ನಿಯಮ ಜಾರಿಯಲ್ಲಿರುತ್ತದೆ. ಕಾಲೇಜು ಶಿಕ್ಷಣ ಆಯುಕ್ತರ ಸುತ್ತೋಲೆ: ಕಾಶಿಇ/ಶೈವಿ/89/ಹೊ.ಕೋ.ಕಾಂ/2024-25 ದಿ. 05-10-2024ರ ಪ್ರಕಾರ 2025-26 ನೇಸಾಲಿಗೆ ಬೇಕಾಗಿರುವ ವಿವಿಧ ಕೋರ್ಸಗಳ ಪ್ರವೇಶ ಮಿತಿ , ಹೊಸ ಕೋರ್ಸ/ಹೊಸ ವಿಷಯ ಸಮೂಹ (Combination)/ ಹೊಸ ವಿಷಯ ಮುಂತಾದವುಗಳಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆದುಕೊಳ್ಳುವುದು ಕಡ್ಡಾಯವಾಗಿದೆ. ಈ ರೀತಿ ಸರ್ಕಾರದ ಇಲಾಖೆಯ ಅಧಿಕೃತ ಅನುಮತಿ ಪಡೆಯದೇ ಸಲ್ಲಿಸಿದ ಸಂಯೋಜನಾ ಅರ್ಜಿಗಳನ್ನು / ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವದಿಲ್ಲಾ.

**27.** ಸ್ನಾತಕ / ಸಾತಕೋತ್ತರ ಕೋರ್ಸಗಳಿಗೆ 1 Division ಹೆಚ್ಚುವರಿ ಪ್ರವೇಶಾತಿ ಪಡೆಯುವ ಮಹಾವಿದ್ಯಾಲಯಗಳು ಮುಂದಿನ 3 ವರ್ಷಗಳವರೆಗೆ 1 Division ಹೆಚ್ಚುವರಿ ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ ಹಾಗೂ 1 Division ಹೆಚ್ಚುವರಿ ಪ್ರವೇಶಾತಿ ಪಡೆದ ಮಹಾವಿದ್ಯಾಲಯಗಳು 2025-26 ನೇ ಸಾಲಿನಲ್ಲಿ ಮತ್ತೆ ಹೆಚ್ಚುವರಿ 20% ಮತ್ತು 20ಕ್ಕೆ ಮೀರದಂತೆ ಪ್ರವೇಶ ಸಂಖ್ಯೆ ಹೆಚ್ಚಿಸಿಕೊಳ್ಳಲು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.

**28.** ಒಂದು ವರ್ಷದ ಕಾಲಾವಧಿಗೆ ನೀಡುವ ಹೆಚ್ಚುವರಿ ಪ್ರವೇಶಾತಿ 20% or not exceeding 20 **(BA, B.Com, BSc ಮಾತ್ರ)** ಗೆ ಅರ್ಜಿ ಸಲ್ಲಿಸಲು UG ಪ್ರವೇಶಾತಿ ದಿನಾಂಕದ 5 ದಿನದ ಮುಂಚೆಯೇ ವಿಶ್ವದ್ಯಾಲಯದಿಂದ ಕಡ್ಡಾಯವಾಗಿ ಪರವಾಣಿಗೆ ಪಡೆಯಬೇಕು ಮತ್ತು ಅದರ ನಂತರವೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು ತಪ್ಪಿದಲ್ಲಿ ಅಂತಹ ವಿದ್ಯಾರ್ಥಿಗಳ ಪ್ರವೇಶವನ್ನು ಮಾನ್ಯ



ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

ಮಾಡಲಾಗುವದಿಲ್ಲ ಮತ್ತು ಅದರಿಂದ ವಿದ್ಯಾರ್ಥಿಗಳಿಗೆ ಆಗುವ ತೊಂದರೆಗೆ ನೇರವಾಗಿ ಕಾಲೇಜಿನ ಪ್ರಾಚಾರ್ಯರೇ ಹೊಣೆಗಾರರಾಗುತ್ತಾರೆ.

**29.** ವೃತ್ತಿಪರ ಕೋರ್ಸ (Professional Courses)ಗಳಾದ BCA/BBA/BSW ಮತ್ತು ಸ್ನಾತಕೋತ್ತರ ಕೋರ್ಸ(PG Course) ಗಳಿಗೆ ಹೆಚ್ಚುವರಿ ಪ್ರವೇಶಾತಿ ಪಡೆಯಲು ಸರ್ಕಾರದ ಶಿಫಾರಸ್ಸು ಖಡ್ಡಾಯವಾಗಿದೆ.

**30.** ವಿಶ್ವವಿದ್ಯಾಲಯಕ್ಕೆ ಬಾಕಿ ಇರುವ UG/ PG ಪ್ರವೇಶಾತಿ ಶುಲ್ಕ/ ಪರಿಕ್ಷಾ ಶುಲ್ಕ/ ಸಂಯೋಜನಾ ಶುಲ್ಕ/ ಹೊಸ ಕೋರ್ಸ/ ಹೊಸ ಕಾಲೇಜು ಬಾಕಿ ಇರುವ ಶೇವಣಿ ಮೊತ್ತವನ್ನು ಪಾವತಿ ಮಾಡದಿರುವ ಸಂದರ್ಭದಲ್ಲಿ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಅರ್ಜಿಯನ್ನು ಪರಿಗಣಿಸಲಾಗುವದಿಲ್ಲಾ.

**31. 2025–26ನೇ ಸಾಲಿಗೆ ಸಂಯೋಜನೆ ಪಡೆಯದ ಮಹಾವಿದ್ಯಾಲಯಗಳು UG/PG ಯಾವುದೇ ವರ್ಷಕ್ಕೆ ಅಂದರೇ ಪ್ರಥಮ ವರ್ಷಕ್ಕೆ ಅಲ್ಲದೇ ದ್ವಿತಿಯ/ ತೃತೀಯ ವರ್ಷಕ್ಕೆ ಸಹ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ದೊರೆಯುವುದಿಲ್ಲ.**

- **ಸಂಯೋಜನಾ ಅರ್ಜಿ ಸಲ್ಲಿಸುವಾಗ ಯಾವುದೇ ತಾಂತ್ರಿಕ ದೋಷಗಳು ಕಂಡುಬಂದಲ್ಲಿ ತಕ್ಷಣ UUCMS SEP ಸಹಾಯವಾಣಿ 080–2441 1500 ಅನ್ನು ಸಂಪರ್ಕಿಸಬೇಕು. ಅಲ್ಲದೇ ತಮ್ಮ ಸಮಸ್ಯೆಯನ್ನು ಲಿಖಿತ ರೂಪದಲ್ಲಿ cdc.rur@gmail.com ಗೆ ಕಳುಹಿಸಿದಲ್ಲಿ CDC ವಿಭಾಗವು ಮುಂದಿನ ಕ್ರಮಕ್ಕೆ UUCMS Team ಗೆ forward ಮಾಡಿ ಪರಿಹಾರಕ್ಕೆ ಪ್ರಯತ್ನಿಸಲಾಗುವುದು ಆದರೆ ಅಂತಿಮವಾಗಿ UUCMS ವಿಭಾಗವೇ ತಮ್ಮ ಸಮಸ್ಯೆಗೆ ಪರಿಹಾರ ನೀಡಬೇಕಾಗುತ್ತದೆ**

**ವಿಶೇಷ ಸೂಚನೆ : 2024–25 ಮತ್ತು ಅದಕ್ಕಿಂತ ಮೊದಲಿನ ಶೈಕ್ಷಣಿಕ ವರ್ಷಗಳಲ್ಲಿ ರಾಯಚೂರು ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆಯದ ಕಾಲೇಜುಗಳ ಹೆಸರುಗಳು 2025–26ನೇ ಸಾಲಿಗೆ UUCMS ತಂತ್ರಾಂಶದಲ್ಲಿ ಇರದಿದ್ದಲ್ಲಿ ಅಂತಹ ಕಾಲೇಜುಗಳಿಗೆ Online ಅರ್ಜಿ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಅಂತಹ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಮತ್ತು ಸರ್ಕಾರದ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು.**

(ಡಾ. ಶಂಕರ ವ್ಹಿ.)
ಕೆ.ಎ.ಎಸ್ (ಆಯ್ಕೆ ಶ್ರೇಣಿ)

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ ರಾಯಚೂರು

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು